NOVEMBER 29, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ಕೇಂದ್ರ ಪುರಸ್ಕೃತ ಬಹುತೇಕ ಯೋಜನೆಗಳಿಗೆ, ಭಗವದ್ಗೀತೆ ಪ್ರೇರಣೆ: ಪ್ರಧಾನಮಂತ್ರಿ ನರೇಂದ್ರ ಮೋದಿ.
- ಸೃಜನಾ ರಂಗಮಂದಿರದಲ್ಲಿ, ಇಂದು ಸಂಜೆ 5.30ಕ್ಕೆ, ಧಾರವಾಡ ಆಕಾಶವಾಣಿ ಕೇಂದ್ರದಿಂದ, 67ನೇ ಆಕಾಶವಾಣಿ ಸಂಗೀತ ಸಮ್ಮೇಳನ.
- ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, 'ಮನ್ ಕಿ ಬಾತ್'; ನಾಳೆ ಭಾನುವಾರ, ಬೆಳಗ್ಗೆ 11 ಗಂಟೆಗೆ, ಪ್ರಸಾರ.
- ಶ್ರೀಲಂಕಾ ಕರಾವಳಿಯಲ್ಲಿ, ವಾಯುಭಾರ ಕುಸಿತ; ರಾಜ್ಯದ ದಕ್ಷಿಣ ಒಳನಾಡಿನಲ್ಲಿ, ಭಾರಿ ಮಳೆ ಸಾಧ್ಯತೆ.

<><><>

ಈಗ ವಾರ್ತೆಗಳ ವಿವರ

<><><>

ಆಯುಷ್ಮಾನ್ ಭಾರತ, ನಾರಿ ಶಕ್ತಿ ಅಭಿಯಾನ, ಸೌರ ಮೈತ್ರಿ ಮಿಷನ್ ಹಾಗೂ ಮಿಷನ್ ಸುದರ್ಶನ ಚಕ್ರದಂತಹ, ಕೇಂದ್ರ ಪುರಸ್ಕೃತ ಯೋಜನೆಗಳಿಗೆ, ಶ್ರೀ ಕೃಷ್ಣ ಬೋಧಿಸಿದ, ಭಗವದ್ಗೀತೆ ಪ್ರೇರಣೆ ನೀಡಿದೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಉಡುಪಿಯ ಶ್ರೀ ಕೃಷ್ಣ ದೇಗುಲದಲ್ಲಿ ಲಕ್ಷ ಕಂಠ ಗೀತಾ ಸ್ತೋತ್ರ ಪಠಣದಲ್ಲಿ ಭಾಗವಹಿಸಿ ಅವರು, ಮಾತನಾಡಿದರು. ಶ್ರೀ ಕೃಷ್ಣ ಮಠದ, ಗೀತಾ ಮಂದಿರದಲ್ಲಿ ಶ್ರೀ ಅನಂತ ಪದ್ಮನಾಭ ಪ್ರತಿಮೆಯನ್ನು, ಪ್ರಧಾನಮಂತ್ರಿ ಅನಾವರಣಗೊಳಿಸಿದರು. ಉಡುಪಿ–ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದ, ಕೋಟ ಶ್ರೀನಿವಾಸ ಪೂಜಾರಿ, ಲಕ್ಷ ಕಂಠ ಗೀತಾ ಸ್ತೋತ್ರ ಪಠಣ, ಗೋಲ್ಡನ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಸೇರ್ಪಡೆಯಾಗಿದೆ ಎಂದು, ಎಕ್ಸ್ ಖಾತೆಯಲ್ಲಿ ಪ್ರಕಟಿಸಿದ್ದಾರೆ. ಉಡುಪಿ ಪರ್ಯಾಯ ಶ್ರೀ ಕೃಷ್ಣ ಮಠದ ಶ್ರೀ ಸುಗುಣೇಂದ್ರತೀರ್ಥ ಸ್ವಾಮೀಜಿ ಸೇರಿದಂತೆ, ಹಿರಿಯ ಸ್ವಾಮೀಜಿಗಳು, ಧರ್ಮಸ್ಥಳದ ಧರ್ಮಾಧಿಕಾರಿ, ರಾಜ್ಯಸಭೆ ಸಂಸದ, ವೀರೇಂದ್ರ ಹೆಗ್ಗಡೆ ಪಾಲ್ಗೊಂಡಿದ್ದರು.

<><><>

ಕೇಂದ್ರ ಪುರಸ್ಕೃತ, ಆರ್ಥಿಕ ಹಾಗೂ ಸಾಮಾಜಿಕ ಭದ್ರತಾ ಯೋಜನೆಗಳಾದ, ಜನ ಸುರಕ್ಷಾ ಯೋಜನೆ, ಪ್ರಧಾನಮಂತ್ರಿ ಜೀವನ ಜ್ಯೋತಿ ವಿಮೆ ಹಾಗೂ ಪ್ರಧಾನಮಂತ್ರಿ ಸುರಕ್ಷಾ ವಿಮೆ ಪಡೆಯುವ ಕುರಿತು, ಜನ ಸಾಮಾನ್ಯರಲ್ಲಿ ಜಾಗೃತಿ ಮೂಡಿಸುವಂತೆ, ಯಾದಗಿರಿ ಜಿಲ್ಲಾ ಪಂಚಾಯಿತಿ ಸಿ.ಇ.ಒ. ಲವೀಶ್ ಒರಡಿಯಾ, ಅಗ್ರಣಿ ಬ್ಯಾಂಕ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಜಿಲ್ಲಾ ಪಂಚಾಯಿತಿ

ಸಭಾಂಗಣದಲ್ಲಿ, ಸಭೆ ನಡೆಸಿ, ವಿವಿಧ ಬ್ಯಾಂಕುಗಳ ಅಧಿಕಾರಿಗಳೊಂದಿಗೆ, ಅವರು ಪ್ರಗತಿ ಪರಿಶೀಲಸಿದರು. ಪ್ರಧಾನಮಂತ್ರಿ ಜೀವನ ಜ್ಯೋತಿ ವಿಮೆ ಹಾಗೂ ಪ್ರಧಾನಮಂತ್ರಿ ಸುರಕ್ಷಾ ವಿಮೆ ಯೋಜನೆ ಫಲಾನುಭವಿಗಳ ಕುಟುಂಬದವರಿಗೆ, ಪರಿಹಾರದ ಚೆಕ್ ವಿತರಿಸಿ, ಅವರು ಸಾಂತ್ವನ ಹೇಳಿದರು.

<><><>

67ನೇ ಆಕಾಶವಾಣಿ ಸಂಗೀತ ಸಮ್ಮೇಳನ, ಇಂದು ಸಂಜೆ 5:45ಕ್ಕೆ, ಧಾರವಾಡದ 'ಸೃಜನಾ' ಅಣ್ಣಾಜಿರಾವ್ ಸಿರೂರ ರಂಗಮಂದಿರದಲ್ಲಿ, ಆಯೋಜಿತವಾಗಿದೆ. ಪ್ರಸಾರ ಭಾರತಿ ಹಾಗೂ ಕೇಂದ್ರ ಸಂಸ್ಕೃತಿ ಸಚಿವಾಲಯದ ಸಹಯೋಗದಲ್ಲಿ, ಆಕಾಶವಾಣಿ ಧಾರವಾಡ ಕೇಂದ್ರ, ಸಂಗೀತ ಸಮ್ಮೇಳನವನ್ನು ಆಯೋಜಿಸಿದೆ. ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಗಾಯಕ, ಪಂಡಿತ ಸೋಮನಾಥ ಮರಡೂರ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಆಕಾಶವಾಣಿ ಧಾರವಾಡ ಕೇಂದ್ರದ, ತಾಂತ್ರಿಕ ವಿಭಾಗದ, ಉಪ ಮಹಾ ನಿರ್ದೇಶಕ, ಅರುಣ ಪ್ರಭಾಕರ, ಕಾರ್ಯಕ್ರಮ ವಿಭಾಗದ ಮುಖ್ಯಸ್ಥರಾದ, ಶರಣಬಸವ ಚೋಳಿನ ಸೇರಿದಂತೆ, ವಿಶೇಷ ಆಹ್ವಾನಿತ ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

ಕನ್ನಡ ರಾಜ್ಯೋತ್ಸವವನ್ನು, ಆಕಾಶವಾಣಿ ಭದ್ರಾವತಿ ಕೇಂದ್ರದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ಕುವೆಂಪು ವಿಶ್ವವಿದ್ಯಾಲಯದ, ಕನ್ನಡಭಾರತಿ ಸದಸ್ಯೆ, ಡಿ.ಆರ್.ಭಾರತಿದೇವಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು, ಅನ್ನ ಕೊಡುವ ಭಾಷೆಯೆಂದು, ಬೇರೆ ಭಾಷೆಯನ್ನು ಓಲೈಸದೆ, ತಾಯ್ನುಡಿ ಕನ್ನಡವನ್ನು ಗೌರವಿಸೋಣ ಎಂದರು. ಭದ್ರಾವತಿ ಆಕಾಶವಾಣಿ ಕೇಂದ್ರದ, ಕಾರ್ಯಕ್ರಮ ಮುಖ್ಯಸ್ಥ, ಎಸ್.ಆರ್.ಭಟ್, ಸೇರಿದಂತೆ, ಆಹ್ವಾನಿತರು ಪಾಲ್ಗೊಂಡಿದ್ದರು.

<><><>

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ, 2025ನೇ ಸಾಲಿನ ಗೌರವ ಪ್ರಶಸ್ತಿಗೆ ಐವರು ಅನುವಾದಕರು ಆಯ್ಕೆಯಾಗಿದ್ದಾರೆ. ಹಾಸನದ ಜೆ.ವಿ ಕಾರ್ಲೊ, ಬೆಂಗಳೂರಿನ ವನಮಾಲಾ ವಿಶ್ವನಾಥ, ಚಿತ್ರದುರ್ಗದ ಸಂಧ್ಯಾ ರೆಡ್ಡಿ, ವಿಜಯನಗರ ಜಿಲ್ಲೆ ಹೊಸಪೇಟೆಯ, ವಿಠಲರಾವ್ ಗಾಯಕವಾಡ, ಬೆಳಗಾವಿ ಜಿಲ್ಲೆ ಅಥಣಿಯ, ಜೆ.ಪಿ. ದೊಡ್ಡಮನಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪ್ರಶಸ್ತಿ, 50 ಸಾವಿರ ರೂಪಾಯಿ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಮರಾಠಿಯಿಂದ, ಕನ್ನಡ ಭಾಷೆಗೆ, ಹಲವು ಕೃತಿಗಳನ್ನು ಅನುವಾದಿಸಿರುವ, ಬೆಳಗಾವಿ ಜಿಲ್ಲೆ ಅಥಣಿಯ ಜೆ.ಪಿ. ದೊಡ್ಡಮನಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಜೆ.ಪಿ ದೊಡ್ಡಮನಿ ಧ್ವನಿ – 46 ಸೆಕೆಂದುಗಳು

<><><>

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(56 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಸರ್ದಾರ ವಲ್ಲಭ ಭಾಯಿ ಪಟೇಲರ, 150ನೇ ಜಯಂತ್ಯುತ್ಸವ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ, ವೀರೇಂದ್ರ ಹೆಗ್ಗಡೆಯವರ, 78ನೇ ಜನ್ಮ ದಿನದ ಅಂಗವಾಗಿ, ಧಾರವಾಡದ ವಿದ್ಯಾಗಿರಿಯ, ಜೆ.ಎಸ್.ಎಸ್. ಮಹಾವಿದ್ಯಾಲಯದ, ಎನ್.ಎಸ್.ಎಸ್ ಘಟಕ, ಏಕತಾ ನಡಿಗೆ ಆಯೋಜಿಸಿತ್ತು. ಎಸ್‌ಡಿಎಂ ಕಾರ್ಯದರ್ಶಿ ಅಜಿತಪ್ರಸಾದ ಜಾಥಾಕ್ಕೆ ಚಾಲನೆ ನೀಡಿದರು, ಆಡಳಿತಾಧಿಕಾರಿ ಅರಿಹಂತ ಪ್ರಸಾದ ಸೇರಿದಂತೆ, ವಿದ್ಯಾರ್ಥಿಗಳು, ಶಿಕ್ಷಕರು ಏಕತಾ ನಡಿಗೆಯಲ್ಲಿ ಪಾಲ್ಗೊಂಡಿದ್ದರು.

<><><>

ಉತ್ತರಕನ್ನಡ ಜಿಲ್ಲೆ, ಅಂಕೋಲಾ ತಾಲೂಕಿನ, ಕೇಣಿ ಬಂದರು ನಿರ್ಮಾಣಕ್ಕೆ, ರಾಜ್ಯ ಸರ್ಕಾರ, ಖಾಸಗಿ ಕಂಪೆನಿಗೆ ಒಪ್ಪಿಗೆ ನೀಡಿದ್ದು, 10 ಸಾವಿರ ಮೀನುಗಾರರ ಬದುಕಿಗೆ ಸಂಚಕಾರ ತಂದೊಡ್ಡಿದೆ ಎಂದು, ಮೀನುಗಾರ ಕುಟುಂಬಗಳು, ವಿವಿಧ ಸಂಘಟನೆಗಳ ಸಹಯೋಗದಲ್ಲಿ, ಹಕ್ಕೊತ್ತಾಯ ಮಂಡಿಸಿದರು. ಅಂಕೋಲಾದಲ್ಲಿ ಜರುಗಿದ, ಜನಾಂದೋಲನ ಸಭೆಯಲ್ಲಿ, ಕರಾವಳಿಯ ಹಳ್ಳ, ಹೊಳೆ, ಗುಡ್ಡ, ಅಳಿವೆ ಹಾಗೂ ಜೌಗು ಪ್ರದೇಶ ರಕ್ಷಣೆ ನಿಟ್ಟಿನಲ್ಲಿ, ರಾಜ್ಯ ಜೌಗು ರಕ್ಷಣಾ ಪ್ರಾಧಿಕಾರ ಮುಂದಾಗಬೇಕು ಎಂದು, ಪರಿಸರಾಸಕ್ತರು ಒತ್ತಾಯಿಸಿದರು.

<><><>

ಆಕಾಶವಾಣಿಯ, ಬಹುಶ್ರುತ, 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ, ನಾಳೆ ಭಾನುವಾರ, ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ದೇಶ–ವಿದೇಶಗಳ ಭಾರತೀಯರನ್ನುದ್ದೇಶಿಸಿ, ಮಾತನಾಡಲಿದ್ದಾರೆ. ಮನದ ಮಾತು ಬಾನುಲಿ ಭಾಷಣದ, 128ನೇ ಆವೃತ್ತಿಯಾಗಿದೆ. ಮನ್ ಕಿ ಬಾತ್, ಆಕಾಶವಾಣಿ ಹಾಗೂ ದೂರದರ್ಶನ, ನ್ಯೂಸ್ ಆನ್ ಏರ್ ಮೊಬೈಲ್ ಅಪ್ಲಿಕೇಶನ್, ಪ್ರಧಾನಮಂತ್ರಿಗಳ ಕಚೇರಿ ಹಾಗೂ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಯೂಟ್ಯೂಬ್ ಚಾನೆಲ್‌ಗಳಲ್ಲಿಯೂ ನೇರ ಪ್ರಸಾರ ಮಾಡಲಾಗುತ್ತಿದೆ. ಹಿಂದಿ ಅವತರಣಿಕೆಯ ಪ್ರಸಾರದ ಬಳಿಕ, ಮನದ ಮಾತು, ಪ್ರಾದೇಶಿಕ ಭಾ ೆಗಳಲ್ಲಿಯೂ ಪ್ರಸಾರವಾಗಲಿದೆ.

<><><>

ಶ್ರೀಲಂಕಾ ಕರಾವಳಿಯಲ್ಲಿ, ವಾಯುಭಾರ ಕುಸಿತದ ಹಿನ್ನೆಲೆ, ರಾಜ್ಯದ ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ, ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮುನ್ಸೂಚನೆ ನೀಡಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಎ.ಬಿ. ಬಸವರಾಜು, ಮುಂದಿನ 4 ದಿನಗಳ ಕಾಲ, ಜಿಲ್ಲೆಯಾದ್ಯಂತ ಮಳೆಯಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಮುಂಜಾಗ್ರತೆ ವಹಿಸುವಂತೆ, ಸೂಚಿಸಿದ್ದಾರೆ. ತುರ್ತು ಸಂದರ್ಭದಲ್ಲಿ, 1–9–2–6 ಅಥವಾ 080–283–88005ಕ್ಕೆ ಕರೆ ಮಾಡಿ, ಸಕಾಲಿಕ ನೆರವು ಪಡೆಯಬಹುದು ಎಂದು, ಮಾಹಿತಿ ನೀಡಿದ್ದಾರೆ.

<><><>

ಬಾಲ ನ್ಯಾಯ ಕಾಯ್ದೆ ಅಡಿ, ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ನೋಂದಣಿಯಾದ ಮಕ್ಕಳ ಭವಿ ್ಯ ರೂಪಿಸಲು, ಪೂರಕ ವಾತಾವರಣ ಕಲ್ಪಿಸುವಂತೆ, ಬಾಗಲಕೋಟೆ ಜಿಲ್ಲಾಧಿಕಾರಿ ಸಂಗಪ್ಪ ಸೂಚಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿಯ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು, ಮಾತನಾಡಿದರು. ಜೈಲಿನಲ್ಲಿರುವ ಪೋ ಕರ ಮಕ್ಕಳ ಮಾಹಿತಿಯನ್ನು ಪಡೆದು, ಅಂತಹ ಮಕ್ಕಳು ಕೌಟುಂಬಿಕ ವಾತಾವರಣದಲ್ಲಿ ಬೆಳೆಯಲು ಹಾಗೂ ವಿದ್ಯಾಭ್ಯಾಸ

ಮುಂದುವರಿಸಲು, 4 ಸಾವಿರ ರೂಪಾಯಿಗಳ ಆರ್ಥಿಕ ಸಹಾಯಧನ, ಪ್ರತಿ ತಿಂಗಳು, ಸಮರ್ಪಕವಾಗಿ ತಲುಪಿಸಲು, ನಿರ್ದೇಶಿಸಿದರು.

<><><>

ಧಾರವಾಡದ, ಚಿತ್ರಕಲಾ ಶಿಲ್ಪಿ ಡಿ.ವಿ ಹಾಲಭಾವಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಆಯೋಜಿಸಿರುವ, ಡಿ.ವಿ ಹಾಲಭಾವಿ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ, ಇಂದು ಸಂಜೆ 5:30ಕ್ಕೆ, ಧಾರವಾಡದ ಆಲೂರು ವೆಂಕಟರಾವ ಸಭಾ ಭವನದಲ್ಲಿ ಜರುಗಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಕೇಂದ್ರ ಪುರಸ್ಕೃತ ಬಹುತೇಕ ಯೋಜನೆಗಳಿಗೆ, ಭಗವದ್ಗೀತೆ ಪ್ರೇರಣೆ; ಪ್ರಧಾನಮಂತ್ರಿ ನರೇಂದ್ರ ಮೋದಿ.

ಸೃಜನಾ ರಂಗಮಂದಿರದಲ್ಲಿ, ಇಂದು ಸಂಜೆ 5.30ಕ್ಕೆ, ಧಾರವಾಡ ಆಕಾಶವಾಣಿ ಕೇಂದ್ರದಿಂದ, 67ನೇ ಆಕಾಶವಾಣಿ ಸಂಗೀತ ಸಮ್ಮೇಳನ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, 'ಮನ್ ಕಿ ಬಾತ್'; ನಾಳೆ ಭಾನುವಾರ, ಬೆಳಗ್ಗೆ 11 ಗಂಟೆಗೆ, ಪ್ರಸಾರ.

ಶ್ರೀಲಂಕಾ ಕರಾವಳಿಯಲ್ಲಿ, ವಾಯುಭಾರ ಕುಸಿತ; ರಾಜ್ಯದ ದಕ್ಷಿಣ ಒಳನಾಡಿನಲ್ಲಿ, ಭಾರಿ ಮಳೆ ಸಾಧ್ಯತೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>